


‘ಐಎಸ್‌ಎಸ್’ನಲ್ಲಿರುವ ಟ್ರೆಡ್ ಮಿಲ್ ಮೇಲೆ ಓಡುತ್ತಿರುವ ಸುನೀತಾ ಚಿತ್ರಕೃಪೆ: ನಾಸಾ

### ದೈನಂದಿನ ಚಟುವಟಿಕೆಗಳ ಸವಾಲು

ದಿನನಿತ್ಯ ಜೀವನದ ಚಟುವಟಿಕೆಗಳಲ್ಲಿ ಒಂದಾದ ಹಲ್ಲುಜ್ಜುವುದೂ ಅಂತರಿಕ್ಷದಲ್ಲಿನ ತೂಕರಹಿತ ಪರಿಸರದಲ್ಲಿ ಸುಲಭವೇನಲ್ಲ. ಅಂತೆಯೇ ‘ಐಎಸ್‌ಎಸ್’ನಲ್ಲಿ ಇಂದು ನಿರ್ವಾತ ಸಾಧನವೊಂದರ (ವ್ಯಾಕ್ಯೂಮ್ ಡಿವೈಸ್) ನೆರವಿನಿಂದ ಕಾರ್ಯನಿರ್ವಹಿಸುವ, ಕೋಟ್ಯಂತರ ರೂಪಾಯಿ ಬೆಲೆಬಾಳುವ ಶೌಚ ಸೌಲಭ್ಯವನ್ನು ತೂಕದ ಸುಳಿವೇ ಇಲ್ಲದ ಅಲ್ಲಿನ ವಿಶಿಷ್ಟ ಪರಿಸರದಲ್ಲಿ ಅತ್ಯಂತ ಜಾಗರೂಕತೆಯಿಂದ ಬಳಸಬೇಕು. ‘ನಿಸರ್ಗದ ಕರೆ’ಯನ್ನು ಮನ್ನಿಸಿ ನಿರಾಳವಾಗುವುದಕ್ಕೆ ಪೂರ್ವಭಾವಿಯಾಗಿ ಗಗನಯಾತ್ರಿಗಳು ಕೆಲವು ನಿಮಿಷಗಳ ಸಿದ್ಧತೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಶೌಚಸಾಧನದ (ಕಮೋಡ್) ಮೇಲೆ ಕುಳಿತಾಗ ‘ಬೆಲ್ಟ್’ ಹಾಕಿಕೊಳ್ಳದಿದ್ದರೆ ಆ ಪೇಚಿನ ಪರಿಸ್ಥಿತಿಯಲ್ಲೇ ಅವರು ತೇಲಾಡುತ್ತಾ ಎಡವಟ್ಟು ಮಾಡಿಕೊಳ್ಳಬೇಕಾಗುತ್ತದೆ!

ಗಗನಯಾತ್ರಿಗಳು ಕೆಲವು ದಿನಗಳ ಕಾಲ ಮಾತ್ರ ಅಂತರಿಕ್ಷದಲ್ಲಿ ವಾಸಿಸಿ ಭೂಮಿಗೆ ಹಿಂತಿರುಗಿದರೆ ಹೆಚ್ಚಿನ ತೊಂದರೆಗಳಿರುವುದಿಲ್ಲ. ಆದರೆ, ದೀರ್ಘಕಾಲ ಅಂತರಿಕ್ಷದ ತೂಕರಹಿತ ಪರಿಸರದಲ್ಲಿ ವಾಸ ಮಾಡುವುದರ ಫಲವಾಗಿ ದೈಹಿಕ ಹಾಗೂ ಮಾನಸಿಕ ತೊಂದರೆಗಳು ಎದುರಾಗುತ್ತವೆ. ಸದಾಕಾಲ ತೂಕ ಅನುಭವಕ್ಕೆ ಬರುವ ಭೂಪರಿಸರದಲ್ಲಿ ಮಾನವ ದೇಹ ವಿಕಾಸ ಹೊಂದಿರುವುದೇ ಇದಕ್ಕೆ ಕಾರಣ.



ಇಂಟರ್‌ನ್ಯಾಷನಲ್ ಸ್ಪೇಸ್ ಸ್ಟೇಷನ್

ಅಂತರಿಕ್ಷದಲ್ಲಿ ಸಿಲುಕಿ, ‘ಐಎಸ್‌ಎಸ್’ನಲ್ಲಿ ತಮ್ಮ ಸಹಚರ ಬುಚ್ ವಿಲ್ಮೋರ್ ಹಾಗೂ ಇತರ ಕೆಲವು ಸಹೋದ್ಯೋಗಿಗಳೊಂದಿಗೆ ತೂಕರಹಿತ ಸ್ಥಿತಿಯಲ್ಲಿ ಅನಿವಾರ್ಯವಾಗಿ ಜೀವಿಸಬೇಕಾಗಿ ಬಂದಿದ್ದ ಅವರು ಭೂಮಿಗೆ ಮರಳುವ ಘಟನೆ ಸಹಜವಾಗಿಯೇ ವಿಶ್ವದ ಗಮನಸೆಳೆದಿತ್ತು. ಈ ಒಂಬತ್ತು ತಿಂಗಳುಗಳಲ್ಲಿ ಒಮ್ಮೆಯಾದರೂ ಅವರು ತಮಗೊದಗಿದ್ದ ಸವಾಲು, ಅನನುಕೂಲಗಳ ಬಗ್ಗೆ ಕಹಿಯಾಗಿ ಇಲ್ಲವೇ ಕಳವಳದಿಂದ ಮಾತನಾಡಿರಲಿಲ್ಲ ಎನ್ನುವುದು ಅವರ ದೃಢ ವ್ಯಕ್ತಿತ್ವಕ್ಕೆ, ಧೈರ್ಯಕ್ಕೆ ನಿದರ್ಶನ.

ಸುನೀತಾ ಅವರು ಭೂಮಿಗೆ ಮರಳುವ ಘಟನೆಯನ್ನು ಕಾತರದಿಂದ ನಿರೀಕ್ಷಿಸುತ್ತಿದ್ದವರಲ್ಲಿ ಸಣ್ಣ ಆತಂಕವೂ ಇತ್ತು. ಕಲ್ಪನಾ ಚಾವ್ಲಾ ಎಂಬ ಭಾರತೀಯ ಸಂಜಾತ ಗಗನಯಾತ್ರಿ 2003ರ ಫೆ. 1ರಂದು ಅಂತರಿಕ್ಷದಿಂದ ಹಿಂತಿರುಗುವಾಗ ಸಾವನ್ನಪ್ಪಿದ್ದ ದುರಂತದ ನೆನಪು ಆತಂಕಕ್ಕೆ ಕಾರಣವಾಗಿತ್ತು.

ಕಾಲ ಸರಿದಂತೆ ‘ಐಎಸ್‌ಎಸ್’ನಿಂದ ದೂರಸರಿದ ‘ಕ್ರೂ ಡ್ರ್ಯಾಗನ್’ ಸುಮಾರು 16 ಗಂಟೆಗಳ ನಂತರ ತನ್ನ ವೇಗವನ್ನು ಕಡಿಮೆ ಮಾಡಿಕೊಂಡು ಭೂವಾತಾವರಣವನ್ನು ಪ್ರವೇಶಿಸಿತು. ಆ ಬಳಿಕ ನೌಕೆಗೇನೂ ಅಪಾಯವಾಗದೇ, ಸುಮಾರು ಮುಕ್ಕಾಲು ಗಂಟೆಯ ನಂತರ ಮಾರ್ಚ್ 19ರ ಬೆಳಗಿನ ಜಾವ 3.37ಕ್ಕೆ ಸರಿಯಾಗಿ, ಪ್ಯಾರಾಚ್ಯೂಟ್‌ಗಳ ನೆರವಿನೊಡನೆ ಅಟ್ಲಾಂಟಿಕ್ ಸಾಗರದ ಮೇಲೆ ಸುರಕ್ಷಿತವಾಗಿ ಇಳಿಯಿತು. ಅಲ್ಲಿಗೆ ಸುನೀತಾ ವಿಲಿಯಂಸ್ ಅವರ ಸಾಹಸಮಯವಾದ ಹಾಗೂ ಉದ್ದೇಶಪೂರ್ವಕವಲ್ಲದ ಮೂರನೆಯ ದೀರ್ಘ ಅಂತರಿಕ್ಷಯಾನ ಸುಗಮವಾಗಿ ಮುಕ್ತಾಯವಾಯಿತು. ತಾವು ಅಂತರಿಕ್ಷಕ್ಕೆ ತೆರಳಿದ್ದ ‘ಸ್ಟಾರ್ ಲೈನರ್’ ನೌಕೆಯ ಬದಲಿಯಾಗಿ ಕಳುಹಿಸಿದ ಮತ್ತೊಂದು ನೌಕೆಯಲ್ಲಿ (‘ಕ್ರೂ ಡ್ರ್ಯಾಗನ್’) ಸುನೀತಾ ಧರೆಗಿಳಿದರು. ಜಗತ್ತು ನೆಮ್ಮದಿಯ ನಿಟ್ಟುಸಿರಿಟ್ಟಿತು.

### ಧೈರ್ಯೇ ಸಾಹಸೇ ಲಕ್ಷ್ಮೀ

ಪ್ರಾಚೀನ ಕಾಲದಿಂದಲೂ ಪ್ರಚಲಿತವಾಗಿರುವ ‘ಧೈರ್ಯೇ ಸಾಹಸೇ ಲಕ್ಷ್ಮೀ’ ನಾಣ್ಣುಡಿ ಸುನೀತಾ ವಿಲಿಯಂಸ್ ಅವರಿಗೆ ಸೂಕ್ತವಾಗಿ ಅನ್ವಯಿಸುತ್ತದೆ. ಅಂತರಿಕ್ಷಯಾನದಂತಹ ಪ್ರಮುಖ ಸವಾಲೆನ್ನಿಸುವ ಸಾಹಸ ಕಾರ್ಯದಲ್ಲಿ, ಆ ಸಂಬಂಧದಲ್ಲಿನ ಹೊಸ ಹೊಸ ವಾಹನಗಳನ್ನು ಪರೀಕ್ಷಿಸುವ ಕಾರ್ಯಕ್ರಮಗಳಲ್ಲಿ ಧೈರ್ಯದಿಂದ ತಮ್ಮನ್ನು ತೊಡಗಿಸಿಕೊಂಡಿರುವ ಸುನೀತಾ ಅವರ ಹೆಸರು ಅಂತರಿಕ್ಷಯಾನದಲ್ಲಿ ಆಸಕ್ತಿಯುಳ್ಳ ಕೋಟ್ಯಂತರ ಜನರಿಗೆ ರೋಮಾಂಚನ ಉಂಟುಮಾಡುವಂತಹದ್ದು.

2024ರ ಜೂನ್ ಮೊದಲ ವಾರದಲ್ಲಿ ಅವರು ಅಂತರಿಕ್ಷಕ್ಕೆ ತೆರಳಿದ ಹೊಸ ನೌಕೆ ‘ಸ್ಟಾರ್ ಲೈನರ್’ನಲ್ಲಿ ಕಂಡುಬಂದ ತಾಂತ್ರಿಕ ದೋಷಗಳು ‘ಐಎಸ್‌ಎಸ್’ನಿಂದ ಭೂಮಿಗೆ ಅವರ ಹಿಂತಿರುಗುವಿಕೆಯನ್ನು ಅನೇಕ ಬಾರಿ